
Read India Books

# ಪುಸ್ತಕ ಕೊಳ್ಳಲು ಹೋದೆವು ನಾವು





ರುಕ್ಮಿಣಿ ಬ್ಯಾನರ್ಜಿ

ಜಯಶ್ರೀ ದೇಶಪಾಂಡೆ

Original Story *(English)* Going to Buy a Book
by Rukmini Banerji
© Pratham Books 2004
Second Kannada Edition: 2009

Illustrations: Santosh Pujari
Kannada Translation:

ISBN: 81-8263-115-7

Registered Office:
PRATHAM BOOKS
633-634, 4th 'C' Main, 6th 'B' Cross,
OMBR Layout, Banaswadi, Bangalore 560 043
✆ 080-25429726 / 27 / 28

Regional Offices:
Mumbai ✆ 022-65162526,
New Delhi ✆ 011-65684113

Typesetting and Layout by: Trimiti Services

Printed by:

Published by PRATHAM BOOKS
www.prathambooks.org

The development of this book was sponsored by
Dubai Creek Round Table, Dubai, U.A.E.



Some rights reserved. This book is CC-BY-3.0 licensed.
Full terms of use and attribution available at:
http://www.prathambooks.org/cc

# ಪುಸ್ತಕ ಕೊಳ್ಳಲು ಹೋದೆವು ನಾವು

ಲೇಖಕರು


**ರುಕ್ಮಿಣಿ ಬ್ಯಾನರ್ಜಿ**

ಅನುವಾದ

**ಜಯಶ್ರೀ ದೇಶಪಾಂಡೆ**

ಆ ದಿನ ಭಾನುವಾರ ; ಶಾಲೆಗೆ ರಜೆ.

ಮನೆಯ ಅಂಗಳದಲ್ಲಿ ಮರದ ನೆರಳಿನಲ್ಲಿ ನಾನು ಮತ್ತು ನನ್ನ ತಮ್ಮ ಆಟ ಆಡುತ್ತಿದ್ದೆವು. ಆಗ ಅಜ್ಜ ಕರೆದರು.  ಅಜ್ಜ ಕಥೆ ಹೇಳುವರೆಂದು ನಾವಿಬ್ಬರೂ ಖುಷಿಯಿಂದ ಮನೆಯೊ ಳಗೆ ಓಡಿದೆವು.  ಅಜ್ಜ ಆರಾಮ ಕುರ್ಚಿಯಲ್ಲಿ ಕುಳಿತಿದ್ದರು. ನಮ್ಮನ್ನು ನೋಡಿ ನಕ್ಕರು. ಪುಟ್ಟೂ , ಪುಟ್ಟೀ, ಬನ್ನಿ.  ಈ ಹಣ ತೆಗೆದುಕೊಳ್ಳಿ. ಇದರಿಂದ ನಿಮಗೆ ಇಷ್ಟವಾದ ಪು  ''ಸ್ತಕ ಕೊಂಡು ಕೊಳ್ಳಿರಿ'' ಎಂದರು ಅಜ್ಜ. ಪುಸ್ತಕ ಓದುವುದು ಎಂದರೆ ನಮಗಿಬ್ಬರಿಗೂ ಬಹಳ ಇಷ್ಟ.



ನಮಗಿಬ್ಬರಿಗೂ ತುಂಬಾ ಸಂತೋಷವಾಯಿತು. ಉತ್ಸಾಹದಿಂದ ಆಲೋಚನೆ ಮಾಡಿದೆವು.

''ಯಾವಾಗ ಹೋಗುವುದು ?

ಈಗ ಹೋಗುವುದೇ ? ಆಮೇಲೆಯೋ ?


ಇವತ್ತೇ ಹೋಗಬಹುದು. ನಾಳೆ ಹೋದರೆ ಹೇಗಿರುತ್ತದೆ ?''

ನಾವಿಬ್ಬರೂ ಸಂತೋಷದಲ್ಲಿದ್ದೆವು.

ಆ ದಿನ ರಜಾ ದಿನ ಆದ್ದರಿಂದ ಕೂಡಲೇ ಪುಸ್ತಕ ಕೊಂಡು ಕೊಳ್ಳಲು ಹೊರಟು ಬಿಟ್ಟೆವು.



ಮನೆಯಿಂದ ಹೊರಟ ಮೇಲೆ ಪುಟ್ಟು ನನಗೆ ಕೇಳಿದ –
''ಅಕ್ಕ ದೊಡ್ಡ ಮಾರುಕಟ್ಟೆಗೇ ಹೋಗೋಣವೆ ? ''
ನಾನು ಹೇಳಿದೆ ''ಪುಟ್ಟು, ದೊಡ್ಡ ಮಾರುಕಟ್ಟೆ ದೂರ ಇದೆ.
ನಾವು ಇಲ್ಲಿಯೇ ಹತ್ತಿರದ ಸಣ್ಣ ಅಂಗಡಿಗೆ ಹೋಗೋಣ.''
''ಯಾರ ಜೊತೆಯಲ್ಲಿ ಹೋಗೋಣ?'' ಪುಟ್ಟು ಕೇಳಿದ.
''ನಾವಿಬ್ಬರೇ ಹೋಗಿ ಬರೋಣ'' ನಾನು ಹೇಳಿದೆ.
ನಾವಿಬ್ಬರೂ ಸಣ್ಣ ಪುಸ್ತಕದ ಅಂಗಡಿಗೆ ಹೊರಟೆವು.


BOOK SHOP
SEA-1
TENALI
BOY
WAR
IARN
FAN
MIXER
REPAIRING

ಪುಸ್ತಕ ಬೇಕೆಂದಾಗ ನಾವು ಯಾವಾಗಲೂ ಇಲ್ಲಿಯೇ ಬರುತ್ತೇವೆ.

ಸಣ್ಣ ಅಂಗಡಿ ಮಾಮ ತುಂಬಾ ಒಳ್ಳೆಯವರು. ಅಂಗಡಿಯಲ್ಲಿ ಬಹಳ ಪುಸ್ತಕಗಳಿವೆ.

ಅವರು ಯಾವಾಗಲೂ ನಮಗೆ ಒಳ್ಳೆಯ ಪುಸ್ತಕಗಳ ಬಗ್ಗೆ ಹೇಳುತ್ತಾರೆ.

ನಾವು ಅಂಗಡಿಯ ಒಳಗೆ ಹೋದೆವು. ನಮ್ಮನ್ನು ನೋಡಿ ಅಂಗಡಿ ಮಾಮ

''ಪುಟ್ಟು, ಪುಟ್ಟಿ ಹೇಗಿದ್ದೀರಾ ?'' ಎಂದು ಕೇಳಿದರು.

ಅವರ ನಗುಮುಖ ನೋಡಿ ನಮಗೆ ಸಂತೋಷವಾಯಿತು.

''ನಾವು ಚೆನ್ನಾಗಿದ್ದೀವಿ ಮಾಮ. ಪುಸ್ತಕ ಕೊಂಡು ಕೊಳ್ಳಲು

ಬಂದಿದ್ದೀವಿ'' ಅಂದೆವು.



SPIDER
HE-MAN
JUNGLE
RAMAYAN
ROAD
BEER-I

''ಹಾಂ! ಒಳ್ಳೆಯದಾಯಿತು'' ಅಂದರು ಮಾಮ.

ನಾವು ಪುಸ್ತಕವನ್ನು ಜೋಡಿಸಿರುವ ಜಾಗದ ಕಡೆಗೆ ಹೋದೆವು.

ಅಬ್ಬಾ! ಎಷ್ಟೊಂದು ಪುಸ್ತಕಗಳು ಇವೆ ಇಲ್ಲಿ! ಅನ್ನಿಸಿತು.

ಸಣ್ಣ ಪುಸ್ತಕಗಳು, ಬಣ್ಣದ ಪುಸ್ತಕಗಳು, ಕಥೆ ಪುಸ್ತಕಗಳು ಎಲ್ಲಾ ಅಲ್ಲಿವೆ.

ನಾನು ಮತ್ತು ಪುಟ್ಟು ಈ ಪುಸ್ತಕಗಳನ್ನೆಲ್ಲಾ ನೋಡುತ್ತಾ ಹೋದೆವು.


SPIDER
HE-MAN
JUNGLE
RAMAYAN
BLUE
ROAD
BEER-I
HISTORY
BIRDS
FAIRY
SWAN
WAR

ಅಷ್ಟರಲ್ಲಿ ಅಂಗಡಿ ಮಾಮ ಅಲ್ಲಿಗೆ ಬಂದರು. ಪುಟ್ಟು ಅವರನ್ನು ಕೇಳಿದ –

''ಮಾಮ ಇಲ್ಲಿ ಎಷ್ಟೊಂದು ಪುಸ್ತಕಗಳು ಇವೆಯಲ್ಲ,

ನಾವು ಯಾವುದನ್ನು ತೆಗೆದು ಕೊಳ್ಳಬೇಕು ಅಂತ ತಿಳಿಯುತ್ತಿಲ್ಲ.''

ಮಾಮ ನಗುತ್ತ ಹೇಳಿದರು ''ಓ ! ಚಿಂತೆ ಮಾಡಬೇಡಿ.

ಇಲ್ಲಿ ನೋಡಿ ಪ್ರಾಣಿಗಳ ಬಗ್ಗೆ ಪುಸ್ತಕಗಳು ಇವೆ. ಇಗೋ ಇಲ್ಲಿ ಕಥೆ

ಪುಸ್ತಕಗಳಿವೆ, ಇಲ್ಲಿ ಈ ಪುಸ್ತಕಗಳು ಇತಿಹಾಸದ ಬಗ್ಗೆ ಇವೆ''

ಎಂದು ಬೇರೆ ಬೇರೆ ಪುಸ್ತಕಗಳನ್ನು ತೋರಿಸಿದರು.


ROAD
BEER-I
CAT

ನಾನು ಕೆಲವು ಪುಸ್ತಕಗಳನ್ನು ಎತ್ತಿ ಕೊಂಡೆ.

ಪುಟ್ಟು ಕೆಲವು ಪುಸ್ತಕಗಳನ್ನು ಎತ್ತಿ ಕೊಂಡ.

ನಾವಿಬ್ಬರೂ ಅಂಗಡಿಯಲ್ಲಿ ಕುಳಿತು ಕೊಂಡೆವು.

ಪುಟ್ಟು ಕುರ್ಚಿಯ ಮೇಲೆ ಕುಳಿತ.

ನಾನು ನೆಲದ ಮೇಲೆ ಕುಳಿತು ಕೊಂಡೆ.

ನಾವಿಬ್ಬರೂ ಪುಸ್ತಕಗಳನ್ನು ಓದುತ್ತಾ ಹೋದೆವು.


LION KING
CENDRELA
PANCHATANTRA
LOST WORD
HE-MAN
CRICKET
FIGHTER
UNIVERSE
BABY
SMALL
RAMAYAN
SMILE
DYNASOR
FEAR
CAT
HORSE
READ
SPEED
BEST
DEEP

ನಾವು ಶಾಂತವಾಗಿ ಓದುತ್ತಾ ಕುಳಿತಿದ್ದೆವು. ಅಲ್ಲಿ ಸದ್ದುಗದ್ದಲಗಳು ಇರಲಿಲ್ಲ.
ಮರಗಳಿಂದ ತಂಗಾಳಿ ಬೀಸುತ್ತಿತ್ತು. ಹಕ್ಕಿಗಳ ಚಿಲಿಪಿಲಿ ಕೇಳಿಸುತ್ತಿತ್ತು .
ಓದುತ್ತಾ ಓದುತ್ತಾ ಒಂದು ಗಂಟೆ ಕಳೆಯಿತು,
ಎರಡು ಗಂಟೆಗಳು ಕಳೆದದ್ದೇ ನಮಗೆ ತಿಳಿಯಲಿಲ್ಲ.
ಕೊನೆಗೆ ಯಾವ ಪುಸ್ತಕ ತೆಗೆದು ಕೊಳ್ಳಬೇಕು ಎಂದು ನಮಗೆ ತಿಳಿಯಿತು.



LION KING
DYNASOR
DEEP
GRASS
RAMAYAN
SMILE
Read
SPEED
FEAR
CAT
HORSE
BIRDS
CRICKET
BABY
SMALL
monkey
SHIVA
PANCHATANTR
LOST WORD
HE-MAN
SUPER HERO
arabian

ಅಂಗಡಿ ಮಾಮ ನಕ್ಕರು.


ಅವರಿಗೆ ಹೇಳಿ, ನಾನು ದಪ್ಪದ ಕಥೆ ಪುಸ್ತಕವನ್ನು ತೆಗೆದು ಕೊಂಡೆ.

ಪುಟ್ಟು ತುಂಬಾ ಬಣ್ಣದ ಚಿತ್ರಗಳಿರುವ ದೊಡ್ಡ ಪುಸ್ತಕವನ್ನು ತೆಗೆದು ಕೊಂಡ.

ಅಂಗಡಿ ಮಾಮನಿಗೆ ಟಿಧನ್ಯವಾದಟಿಹೇಳಿದೆವು.


ROAD
BEER-I
JUNGLE
RAMAYAN
BLUE
JUNGLE
RAMAYAN
BLUE
CARTOONS
DREAM

ನಾವಿಬ್ಬರೂ ಸಂತೋಷದಿಂದ ಮನೆಗೆ ಬಂದಾಗ ಅಜ್ಜ ಮಂಚದ ಮೇಲೆ ಕುಳಿತಿದ್ದರು.
ನಾವೂ ಅವರ ಮಂಚ ಏರಿ , ಅಜ್ಜನಿಗೆ ನಾವು ತಂದ ಪುಸ್ತಕ ತೋರಿಸಿದೆವು.
ಆಮೇಲೆ , ಅವರ ಪಕ್ಕದಲ್ಲಿ ಕುಳಿತು ಅಜ್ಜನ ಜೊತೆ ಕಥೆ ಓದಿದೆವು.


DREAM

ಮಕ್ಕಳು ತಮ್ಮ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳಲು ಬಯಸುತ್ತಾರೆ. ಪುಸ್ತಕ ಕೊಳ್ಳಲು

**ಈ ಮಾಲಿಕೆಯ ಇನ್ನೊಂದು ಪುಸ್ತಕ**

ಮೈನವಿರೇಳಿಸುವ ಇನ್ನು ಅನೇಕಾನೇಕ ಭಾರತೀಯ ಭಾಷಾ ಪುಸ್ತಕಗಳ
ಮಾಹಿತಿಗಾಗಿ ಸಂಪರ್ಕಿಸಿ : www.prathambooks.org

ನಮ್ಮ ಪುಸ್ತಕಗಳು ಕನ್ನಡ, ಇಂಗ್ಲೀಷ್, ಹಿಂದಿ, ತೆಲುಗು, ತಮಿಳು, ಮರಾಠಿ, ಗುಜರಾತಿ,
ಬೆಂಗಾಲಿ, ಪಂಜಾಬಿ, ಉರ್ದು ಮತ್ತು ಒರಿಯಾ ಭಾಷೆಗಳಲ್ಲೂ ಲಭ್ಯ ಇವೆ.

**PRATHAM BOOKS**

ಅತ್ಯುತ್ತಮ ಗುಣಮಟ್ಟದ ಪುಸ್ತಕಗಳನ್ನು ಭಾರತೀಯ ಭಾಷೆಗಳಲ್ಲಿ ಮಕ್ಕಳಿಗೆ
ಎಟುಕುವ ಬೆಲೆಯಲ್ಲಿ ನೀಡುವ ಲಾಭರಹಿತ ಪ್ರಕಾಶನ ಸಂಸ್ಥೆ 'ಪ್ರಥಮ್ ಬುಕ್ಸ್'

ISBN 81-8263-115-7

Age Group: 3-6 years
(Kannada)
MRP Rs. 20.00